## 14

# ದೇವತ್ವವು ಏನಾಗಿದೆ?

ರಿಚರ್ಡ್ ಸಿ. ಟ್ರೆಂಚ್ ಅವರು ತಮ್ಮ ಪ್ರಸಿದ್ಧ "Synonyms of the New Testament"ಎಂಬ ಪುರಾತನ ಸಾಹಿತ್ಯದಲ್ಲಿ ದೇವತ್ವವನ್ನು ವ್ಯಕ್ತಪಡಿಸುವ ಹೊಸ ಒಡಂಬಡಿಕೆಯ ಪದವು *theotes* (ಕೊಲೊಸ್ಸೆ 2:9) ಎಂದು ಹೇಳಿದ್ದಾನೆ,[1] "Godhead" (AV, ASV), "Deity" (NASB, NIV) ಮತ್ತು "deity" (RSV) ಎಂದು ಭಾಷಾಂತರಿಸಲ್ಪಟ್ಟಿದ್ದು, *theos* "ದೇವರು," "ಬೇಡಿಕೊಳ್ಳಲ್ಪಡುವಾತನು" ಎಂಬುದರಿಂದ ಬಂದಿರುತ್ತದೆ. "Godhead" ಎಂಬ ಮಾತಿನಲ್ಲಿ ಎಷ್ಟು ಒಳಗೊಂಡಿರುವುದೆಂದು ಈಗ ಯಾವ ಮಾನವನೂ ತಿಳಿದಿರುವದಿಲ್ಲ. "ದೇವರ ಅಗಾಧಗಳನ್ನು ಕಂಡುಕೊಳ್ಳ ಬಲ್ಲಿಯಾ? ಸರ್ವಶಕ್ತನನ್ನು ಸಂಪೂರ್ಣವಾಗಿ ಗ್ರಹಿಸಿಕೊಳ್ಳಬಹುದೋ?" (ಯೋಬ 11:7) ಎಂದು ಜೋಫರನು ಯೋಬನಿಗೆ ಸವಾಲು ಹಾಕಿದ್ದಾನೆ. "ದೇವಭಕ್ತಿಗೆ ಆಧಾರ ವಾಗಿರುವ ಸತ್ಯಾರ್ಥವು ಗಂಭೀರವಾದದ್ದೆಂಬದನ್ನು" ಯಾರೂ ಅಲ್ಲಗಳೆಯಲಾರರು ಎಂದು ಪೌಲನು ಬರೆದಿದ್ದಾನೆ (1 ತಿಮೊಥೆ 3:16). ಈ ಜೀವನದಲ್ಲಿ ದೇವರ ಪರಿಪೂರ್ಣತೆಯನ್ನು ತಿಳಿದು ಕೊಳ್ಳುವದನ್ನು ಅವನು ಬಿಟ್ಟುಬಿಟ್ಟನು: "ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಆಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳನ್ನು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!" (ರೋಮಾಪುರ 11:33).

ವ್ಯವಹಾರಿಕ ತಳಹದಿಯ ಮೇಲೆ, ನಾವು ಆತನನ್ನು ತಿಳಿಯ ಬೇಕೆಂದು ದೇವರು ಅಪೇಕ್ಷಿಸುತ್ತಾನೆ. ನಾವು ಹಾಗೆ ಮಾಡಿದರೆ ಮಾತ್ರವೇ ನಾವು ಪರಲೋಕವನ್ನು ಪ್ರವೇಶಿ ಸಬಹುದು. "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು" (ಯೋಹಾನ 17:3). ಪ್ರೀತಿಯ ದೇವರು ಅಸಾಧ್ಯವಾದುದ್ದನ್ನು ಕೇಳುವದಿಲ್ಲ, ಆತನ ಆಜ್ಞೆಗಳು ಭಾರವಾದವುಗಳಾಗಿರುವುದಿಲ್ಲ (1 ಯೋಹಾನ 5:3), ಪ್ರಯಾಣ ಮಾಡತ್ತಿದ್ದ ಮನುಷ್ಯನು, ಸರಳವಾಗಿದ್ದರೂ, ದೇವರು ರಕ್ಷಿಸುವ ಜ್ಞಾನಕ್ಕೆ ಬರಬಹುದು (ಯೆಶಾಯ 35:8). "ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳಿದವರಾಗಿರ್ರಿ" (ಎಫೆಸ 5:17).

### " 'ELOHIM" ಎಂಬ ಪದ

ಗ್ರೀಕ ಪದ *theos* ಎಂಬುದು "ಬೇಡಿಕೊಳ್ಳಲ್ಪಡುವಾತನು" ಎಂದು ಅರ್ಥಮಾಡುವುದಾದರೆ, ಅದೇ ವಿಚಾರವು ಹೀಬ್ರೂ ಪದ *'elohim*ದಲ್ಲಿದೆ. "ಭಯ ಪಡಲ್ಪಡತಕ್ಕವನು" ಇಲ್ಲವೇ "ಭಕ್ತಿತೋರಿಸಲ್ಪಡತಕ್ಕವನು" ಎಂದರ್ಥವಾಗುತ್ತದೆ.[2] ಹೀಗೆ *'elohim* ಎಂಬ ರೂಪವು ಆರಾಧಿಸಲ್ಪಡುವ ಜೀವಿ ಎಂಬ ಅರ್ಥಕ್ಕೆ ಬರುತ್ತದೆ. ಹೀಗಿದ್ದರೂ ಈ ಪದವು ವ್ಯಾಕರಣದ ಪ್ರಕಾರವಾಗಿ ಬಹುವಚನದ್ದಾಗಿದ್ದು ಅಕ್ಷರಶಃವಾಗಿ "gods; ದೇವರುಗಳು" ಎಂದು ವಿಮೋಚನಕಾಂಡ 20:3ರಲ್ಲಿ ಭಾಷಾಂತರಿಸಲ್ಪಟ್ಟಿದೆ: "ನಾನಲ್ಲದೆ ನಿನಗೆ ಬೇರೆ ದೇವರುಗಳು [*'elohim*] ಇರಬಾರದು." ಅಂಥದ್ದೇ

ನಿರ್ದಿಷ್ಟವಾದ ರೂಪವು ಆದಿಕಾಂಡ 1:1ರಲ್ಲಿ ಕಾಣಿಸಿಕೊಳ್ಳುತ್ತದೆ: "ಆದಿಯಲ್ಲಿ ದೇವರು *('elohim)* ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು." ಈ ಬಹುವಚನ ರೂಪದ ಕಾರಣದಿಂದ, ಬೈಬಲು ಬಹುದೇವತಾವಾದವನ್ನು ಒಪ್ಪಿಕೊಳ್ಳುತ್ತದೆ ಎಂದು ತಪ್ಪನ್ನು ಹುಡುಕಿದ್ದಾರೆ. ಅದರ ಪ್ರಕಾರವಾಗಿ, ಅವರು ಆದಿಕಾಂಡ 1:1ನ್ನು ಹೀಗೆ ಭಾಷಾಂತರಿಸುವರು: "ಆದಿಯಲ್ಲಿ ದೇವರುಗಳು ಆಕಾಶವನ್ನು ಭೂಮಿಯನ್ನೂ ಉಂಟುಮಾಡಿದರು." ಬೈಬಲಿನ ಇತರ ವಾಕ್ಯಭಾಗಗಳು ಒಬ್ಬನೇ ನಿಜವಾದ ದೇವರು ಇರುವನೆಂದು ನಿರ್ದಿಷ್ಟವಾಗಿ ತೋರಿಸಿದ್ದರಿಂದ (ಧರ್ಮೋಪದೇಶ ಕಾಂಡ 6:4; 1 ಕೊರಿಂಥ 8:6), ಆದಿಕಾಂಡ 1:1ನ್ನು ಯಾವ ಪಂಡಿತನೂ "ದೇವ ರುಗಳು" ಎಂಬ ಪದದೊಂದಿಗೆ ಭಾಷಾಂತರಿಸಿರುವದಿಲ್ಲ. ಆದಿಕಾಂಡ 1:1 ಅನೇಕ ದೇವರುಗಳ ತತ್ವವನ್ನು ಬೋಧಿಸದೇ ಇರುವದರಿಂದ, *'elohim* ಎಂಬ ಬಹುವಚನ ಪದ ಯಾಕೆ? ಸಂಖ್ಯಾ ಬಹುವಚನವಲ್ಲದೇ ಭವ್ಯತೆಯ ಬಹುವಚನ ಇಲ್ಲವೇ ಗೌರವಾರ್ಥ ಬಹುವಚನವನ್ನು ಪುರಾತನರು ಉಪಯೋಗಿಸಿದರೆಂಬುದನ್ನು ಪುರಾತನ ವಸ್ತು ಶೋಧನ ಶಾಸ್ತ್ರ ತೋರಿ ಸಿದೆ. ಈ ಗೌರವಾರ್ಥ ಬಹುವಚನವು ಆದಿಕಾಂಡ 42:30ರಲ್ಲಿಯೂ ಇರುತ್ತದೆ. ಅಲ್ಲಿ ಯೋಸೇಫನ ಸಹೋದರರರುಗಳು ಅಕ್ಷರಶಃವಾಗಿ "The man, the lords of the land, spoke roughly with us" ಎಂದು ಹೇಳಿದರು. ಮೋಶೆಯಿಂದ ಬರೆಯಲ್ಪಟ್ಟಂತೆ, "lords" ಎಂಬ ಪದವು ಬಹುವಚನದ್ದು, ಆದರೆ ಹಿನ್ನೆಲೆಯಲ್ಲಿ ಇದು ಒಬ್ಬನೇ ವ್ಯಕ್ತಿಗೆ, ಯೋಸೇಫನಿಗೆ ಸಂಬಂಧಿಸಿದೆ. ಪರಿಣಾಮವಾಗಿ, ಬಾಷಾಂತರಕಾರರು ಬಹುವಚನವನ್ನು ಏಕವಚನಕ್ಕೆ ಬದಲಿಸಿ ಈ ಮಾತನ್ನು "the lord of the land" ಎಂದು ಭಾಷಾಂತರಿಸುತ್ತಾರೆ.

ಪರಿಶುದ್ಧ ಬರಹಗಳಲ್ಲಿ ಬಹಳ ಒಮ್ಮೊಮ್ಮೆ ದೇವರಿಗಾಗಿ ಏಕವಚನ ಪದವು *('eloah)* ಕಂಡುಬರುತ್ತದೆ, ಆದರೆ ಬಹುವಚನವು 2,570 ಸಲ ಬರುತ್ತದೆ. ಆದಿಕಾಂಡ 1:1ರಲ್ಲಿ ಭಾಷಾಂತರಕಾರರು ಸಮನಾಗಿ ರೂಪವನ್ನು ಏಕವಚನದಂತೆ ಉಪಯೋಗಿಸಿ "God" ಎಂದು ದೊಡ್ಡ ಅಕ್ಷರದೊಂದಿಗೆ ಯಾಕೆ ಕೊಡುತ್ತಾರೆಂಬುದು ಸ್ಪಷ್ಟವಾಗುತ್ತದೆ. ಯಾವುದೇ ಬೈಬಲ್ ವಿದ್ಯಾರ್ಥಿಯು ಯಾವುದೇ ದೇವರನ್ನು ಇಲ್ಲವೇ ಅನೇಕ ದೇವರುಗಳನ್ನು ವಿಶ್ವದ ಸೃಷ್ಟಿಕರ್ತರಾಗಿರುವರೆಂದು ಯೋಚಿಸುವದಿಲ್ಲ.

## ತ್ರೈಯೇಕತ್ವ

*'Elohim*ದ ಬಹುವಚನ ರೂಪಕ್ಕೆ ಇನ್ನೊಂದು ಮಹತ್ವವಿದೆ. ಬೈಬಲಿನ ದೇವತ್ವವು ಒಂದು ಘಟಕದಂತಿದ್ದರೂ (ಧರ್ಮೋಪದೇಶಕಾಂಡ 6:4ದಲ್ಲಿ *ehad*; 1 ಕೊರಿಂಥ 8:6ರಲ್ಲಿ *heis*), ಆತನು ತ್ರಿತ್ವ ಜೀವಿ, ತ್ರೈಯೇಕನು ಆಗಿದ್ದಾನೆ. ಆದಿಕಾಂಡ 1:26ರಲ್ಲಿ ದೇವರು "ಮನುಷ್ಯನನ್ನು ನಮ್ಮ ಸ್ವರೂಪದಲ್ಲಿ ಉಂಟುಮಾಡೋಣ" ಎಂದು ಹೇಳಿ ದನು. ಬೈಬಲಿನ ಎರಡನೆಯ ವಚನವು ದೇವರ ಆತ್ಮನನ್ನು ಸೃಷ್ಟಿಸುವ ಕಾರ್ಯದ ಭಾಗವಾಗಿ ಹೇಳುತ್ತದೆ. ಯೇಸುವಿಗೆ ಸೃಷ್ಟಿಯಲ್ಲಿ ಭಾಗವಿತ್ತು ಎಂಬುದನ್ನು ಇತರ ವಚನಗಳಿಂದ ತಿಳಿಯುತ್ತೇವೆ (ಯೋಹಾನ 1:3; ಕೊಲೊಸ್ಸೆ 1:16). ಹಾಗಾದರೆ ದೇವತ್ವವು ತ್ರಿತ್ವ ಜೀವಿಯಾಗಿದೆ ಎಂಬುದು ಸ್ಪಷ್ಟವಾಗಿದೆ, ಮೂರು ಹೀಗೆ ಒಂದಾಗಿರ ಬಹುದು ಮತ್ತು ಒಂದು ಹೇಗೆ ಮೂರಾಗಿರಬಹುದು ಎಂಬುದು ಪ್ರಕಟಿತ ಸಂಗತಿಗಳಾ ಗಿರುವದಿಲ್ಲ (ಧರ್ಮೋಪದೇಶಕಾಂಡ 29:29), ಬೈಬಲಿನ ಘಟನೆಯು ನಿಸ್ಸಂದೇಹ ವಾದದ್ದಾಗಿದೆ.

## ತಂದೆಯಾದ ದೇವರು

ವಿಶ್ವಾಸದ ಒಪ್ಪಿಸಿಕೊಡಲಾಗದ ವಿಷಯಗಳು ಸಮಾಧಾನದ ಬಂಧನದಲ್ಲಿ ಸಹೋದರರ ಐಕ್ಯತೆಗಿಂತ ಹೆಚ್ಚು ಅಮೂಲ್ಯವಾದದ್ದು, "ಒಬ್ಬನೇ ಆತ್ಮ ... ಒಬ್ಬನೇ ಕರ್ತ ... [ಮತ್ತು] ಎಲ್ಲರಿಗೂ ತಂದೆಯಾಗಿರುವ ಒಬ್ಬನೇ ದೇವರು" (ಎಫೆಸ 4:4-6). ಯೇಸುವು ತಾನು ತಂದೆಯಾಗಿದ್ದೇನೆ ಎಂದು ಹೇಳಿಕೊಳ್ಳಲಿಲ್ಲ. (ಯೆಶಾಯ 9:6ರಲ್ಲಿ "ನಿತ್ಯನಾದ ತಂದೆ" ಆತನು ಆಗಿರುವಂಥದ್ದು, ಆತನು ಸಮಯಾತೀತನಾಗಿರುವನೆಂಬುದನ್ನು ಪ್ರತಿಬಿಂಬಿಸುವ "ನಿತ್ಯತ್ವದ ತಂದೆ" ಎಂದು ಹೇಳಿದರೆ ಅಷ್ಟೇ ಸರಿಯಾಗಿರುತ್ತದೆ.) ಯೇಸುವಿನ ತಿಳುವಳಿಕೆಯಲ್ಲಿ "ತಂದೆ" ಎಂದು ಕರೆಯಲ್ಪಟ್ಟಾತನು ಆತನಿಂದ ಭಿನ್ನವಾಗಿರುವ ಜೀವಿಯಾಗಿದ್ದಾನೆ, ಆತನ ಮೇಲೆ ಯೇಸು ಅವಲಂಭಿಸಿದ್ದನು ಮತ್ತು ಆತನಿಗೆ ಯೇಸು ಪ್ರಾರ್ಥನೆ ಮಾಡಿದನು. ಆತನ ಬಿನ್ನಹಗಳು "ತಂದೆಯೇ" (ಯೋಹಾನ 17:1ರಲ್ಲಿ ಯಂತೆ) ಎಂದು ಪ್ರಾರಂಭಿಸಲ್ಪಟ್ಟವು ಮತ್ತು ಆತನ ಪ್ರಸಂಗಗಳು ಆತನ ಕೇಳುಗರಿಗೆ "ನಿಮ್ಮ ತಂದೆ" ಎಂದು ಮತ್ತು "ನಿಮ್ಮ ಪರಲೋಕದ ತಂದೆ" ಎಂದು ತೋರಿಸಿದವು (ಮತ್ತಾಯ 5:45, 48), ಆತನು ತನ್ನ ಶಿಷ್ಯರಿಗೆ ವಿಶ್ವದ ದೇವರನ್ನು "ನಮ್ಮ ತಂದೆಯೇ" ಎಂದು ಸಂಬೋಧಿಸಬೇಕೆಂದು ಬೋಧಿಸಿದನು (ಮತ್ತಾಯ 6:9). ಬೇಥಾನ್ಯದ ಸಮಾಧಿಯ ಬಳಿಯಲ್ಲಿ "ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ - ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ ... ಎಂದು ಹೇಳಿದನು" (ಯೋಹಾನ 11:41, 42).

ಯೇಸುವು ಶಿಲುಬೆಯ ಶ್ರಮೆಯನ್ನು ಸಮೀಪಿಸಿದಂತೆ ಭಯಗೊಂಡವನಾಗಿದ್ದನು: "ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನೇನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು, ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು. ತಂದೆಯೇ, ನಿನ್ನ ಹೆಸರನ್ನು ಮಹಿಮೆ ಪಡಿಸಿಕೋ ಅಂದನು" (ಯೋಹಾನ 12:27, 28ಎ). ದೇವರು ಪೂರ್ಣ ದೇವತ್ವವಾಗಿದ್ದಾನೆ ಎಂಬ ಸುಳ್ಳು ವಿಚಾರವು ಯೇಸುವಿನ ಪ್ರಾರ್ಥನೆಗೆ ಉತ್ತರ ಕೊಟ್ಟ ಧ್ವನಿಯು - ಪರಲೋಕದಿಂದ ಬಂದ ವಾಣಿಯು ಸ್ಪಷ್ಟವಾಗಿ ಅಲ್ಲಗಳೆಯಿತು: "ಮಹಿಮೆ ಪಡಿಸಿದ್ದೇನೆ, ತಿರಿಗಿ ಮಹಿಮೆ ಪಡಿಸುವೆನು" (ಯೋಹಾನ 12:28ಬಿ). ಅಲ್ಲಿ ನಿಂತು ಕೊಂಡಿದ್ದ ಜನರು ತಾವು ಗುಡುಗುವದನ್ನು ಕೇಳಿಸಿಕೊಂಡಿದ್ದೇವೆಂದು ಯೋಚಿಸಿದರು, ಇತರರು ಯೇಸುವಿನೊಂದಿಗೆ ದೇವದೂತನು ಮಾತಾಡಿದನೆಂದು ಯೋಚಿಸಿದರು. ಇಡೀ ಘಟನೆಯು ದೇವತ್ವದ ಇಬ್ಬರು ಸದಸ್ಯರ ಮಧ್ಯೆ ನಡೆದ ಸಂಪರ್ಕವನ್ನು ತೋರಿಸುತ್ತದೆ.

ತಂದೆಗಾಗಿ ಅರಮಾಯ ಭಾಷೆಯಲ್ಲಿ *Abba* ಎಂಬ ಮಾತಿನಲ್ಲಿ ನಿಕಟತೆಯ ಮತ್ತು ಅಸಾಮಾನ್ಯವಾದ ಸಮೀಪತೆಯ ಭಾವನೆಯನ್ನು ಕಂಡುಕೊಳ್ಳಲು ಕೆಲವರು ಪ್ರಯತ್ನಿಸಿದ್ದಾರೆ. ಹಾಗಿದ್ದರೂ, *ಅಬ್ಬಾ* ಎಂಬುದಕ್ಕೆ ಅರಮಾಯ ಭಾಷೆಯಲ್ಲಿ ಇರುವ ಅದೇ ಅರ್ಥವು ಗ್ರೀಕಿನಲ್ಲಿ *pater* ಎಂಬುದಕ್ಕೂ ಮತ್ತು ಇಂಗ್ಲಿಷ್‌ನಲ್ಲಿ "ಫಾದರ್" ಎಂಬುದಕ್ಕೂ ಇದೆ. ಯೇಸುವು ಗೆತ್ಸೆಮನೆಯಲ್ಲಿಯ ತನ್ನ ಪ್ರಾರ್ಥನೆಯಲ್ಲಿ ಅರಮಾಯ ಮತ್ತು ಗ್ರೀಕ ರೂಪಗಳೆರಡನ್ನೂ ಉಪಯೋಗಿಸಿದನು (ಮಾರ್ಕ 14:36). ಜೀವ ಮತ್ತು ಮರಣದ ಮೇಲೆ ಬಲವುಳ್ಳವನೆಂದು ತಾನು ತಿಳಿದಿರುವ, ತನ್ನಿಂದ ಭಿನ್ನವಾಗಿರುವ ಜೀವಿಗೆ ಆತನು ಪ್ರಾರ್ಥಿಸುತ್ತಿದ್ದನು, "ತಂದೆಯೇ" ಎಂದು ಆತನು ಕರೆದ ಜೀವಿಗೆ ಪಾಪಗಳನ್ನು ಕ್ಷಮಿಸುವ ಅಧಿಕಾರವಿದೆ ಎಂದೂ ಆತನು ನಂಬಿದ್ದನು. ತನ್ನನ್ನು ಕೊಲ್ಲುತ್ತಿರುವವರಿಗಾಗಿ ಆತನು ಶಿಲುಬೆಯಿಂದ ಪ್ರಾರ್ಥಿಸಿದನು: "ತಂದೆಯೇ ಅವರನ್ನು ಕ್ಷಮಿಸು; ಅವರು ತಾವು

ಏನು ಮಾಡುತ್ತಿದ್ದೇವೆಂಬುದನ್ನು ಅರಿಯರು'' (ಲೂಕ 23:34). ನಿಶ್ಚಯವಾಗಿಯೂ, ''ತಂದೆಯಾದ ದೇವರು'' ಎಂದು ಕರೆಯಲ್ಪಟ್ಟ ಅತೀ ಶ್ರೇಷ್ಠವಾದ ಜೀವಿಯು ಇದ್ದಾನೆ, ಆತನು ''ಕುಮಾರನಾದ ದೇವರಿಗಿಂತ'' ಮತ್ತು ''ಪರಿಶುದ್ಧಾತ್ಮನಾದ ದೇವರಿಗಿಂತ'' ಭಿನ್ನವಾಗಿದ್ದಾನೆ.

## ಕುಮಾರನಾದ ದೇವರು

''ಮನುಷ್ಯನನ್ನು ಉಂಟುಮಾಡೋಣ'' (ಆದಿಕಾಂಡ 1:26) ಎಂದು ತಂದೆಯಾದ ದೇವರು ಹೇಳಿದಾಗ ಕುಮಾರನಾದ ದೇವರು ಸೃಷ್ಟಿಯಲ್ಲಿ ಒಳಗೊಂಡಿದ್ದಾನೆಂದು ನಾವು ಈಗಾಗಲೇ ಗಮನಿಸಿದ್ದೇವೆ. ದೇವತ್ವದ ಎರಡನೆಯ ವ್ಯಕ್ತಿಯು ಹಳೇ ಒಡಂಬಡಿಕೆಯಲ್ಲಿ ''ಕರ್ತನ ದೂತನಂತೆ'' ತಿಳಿಯಲ್ಪಟ್ಟಿದ್ದಾನೆಂದು ಕೆಲವು ವ್ಯಾಖ್ಯಾನಕಾರರು ನಂಬುತ್ತಾರೆ (ನೋಡಿರಿ ಆದಿಕಾಂಡ 16:7; 22:15, 16; 31:11, 13; ವಿಮೋಚನಕಾಂಡ 3:2-4). ಹಾಗಿದ್ದರೂ, ಕರ್ತನ ದೂತನು ಕುಮಾರನಾದ ದೇವರಾಗಿದ್ದರೆ, ಆರಾಧಿಸಲ್ಪಡಲು ಆತನು ನಿರಾಕರಿಸಲ್ಪಡುತ್ತಿರಲಿಲ್ಲ (ನ್ಯಾಯಸ್ಥಾಪಕರು 13:16). ಯೇಸುವನ್ನು ಕುರಿತು, ತಂದೆಯು, ''ದೇವರ ದೂತರೆಲ್ಲರೂ ಆತನಿಗೆ ಅಡ್ಡ ಬೀಳಲಿ'' ಎಂದು ಆಜ್ಞಾಪಿಸಿದನು (ಇಬ್ರಿಯ 1:6). ಕರ್ತನ ದೂತನು ಒಬ್ಬ ಮಹತ್ವದ ಜೀವಿಯಾಗಿದ್ದನು, ಆದರೆ ಅವನು ದೇವತ್ವದ ದ್ವಿತೀಯ ವ್ಯಕ್ತಿಯಾಗಿರಲಿಲ್ಲ.

ಕಿಂಗ್ ಜೇಮ್ಸ್ ಭಾಷಾಂತರದಲ್ಲಿ ಉರಿಯುವ ಕುಲುಮೆಯಲ್ಲಿ ನಾಲ್ಕು ಜನರ ಬಗ್ಗೆ ಹೇಳಿದ ನೆಬೂಕದ್ನೆಚ್ಚರನ ಮಾತುಗಳು ("... ನಾಲ್ಕನೆಯವನ ರೂಪವು ದೇವಕುಮಾರನ ರೂಪದಂತಿದೆ"; ದಾನಿಯೇಲ 3:25), ಶದ್ರಾಕ್, ಮೇಶಾಕ್ ಮತ್ತು ಅಬೇದ್ನೆಗೋ ಅವರೊಂದಿಗೆ ಯೇಸುವು ಒಬ್ಬನಾಗಿದ್ದನೆಂದು ಕೆಲವರು ಯೋಚಿಸುವದಕ್ಕೆ ಕಾರಣವಾಗಿದೆ, ಆತನು ಇದ್ದಿರಬಹುದು; ಆದರೆ ಪದಗಳು ಹೆಚ್ಚು ಅಕ್ಷರಶಃವಾಗಿ ''ನಾಲ್ಕನೆಯವನ ರೂಪವು ದೇವರುಗಳ ಮಗನ ಹಾಗೆ ಇರುತ್ತದೆ'' ಎಂದಾಗುತ್ತದೆ. ಈ ಭಾಷಾಂತರವು ನೆಬೂಕದ್ನೆಚ್ಚರನ ಬಗ್ಗೆ ತಿಳಿಯಲ್ಪಟ್ಟದ್ದಕ್ಕೆ ಹೆಚ್ಚು ಚೆನ್ನಾಗಿ ಹೊಂದಿಕೊಳ್ಳುತ್ತದೆ: ಅನ್ಯ ಅರಸನು ದೇವತ್ವದ ಎರಡನೆಯ ಸದಸ್ಯನ ಬಗ್ಗೆ, ದೇವರ ಕುಮಾರನ ಬಗ್ಗೆ ತಿಳಿದಿರುವ ಸಾಧ್ಯತೆಯಿರುವದಿಲ್ಲ.

ದೇವತ್ವದ ಎರಡನೆಯ ಸದಸ್ಯನು, ಹಳೇ ಒಡಂಬಡಿಕೆಯ ದಿನಗಳಲ್ಲಿ ಚಟುವಟಿಕೆಯಿಂದ ಇದ್ದನು ಎಂಬುದು ಸ್ಪಷ್ಟವಾಗಿದೆ. ಆತನು ಸೃಷ್ಟಿಕರ್ತನಾಗಿದ್ದುದಲ್ಲದೆ, ಅನಂತರದಲ್ಲಿ ಅರಣ್ಯದಲ್ಲಿ ಇಸ್ರಾಯೇಲ್ಯರೊಂದಿಗೆ, ಅವರು ನೀರುಕುಡಿದ ಆತ್ಮಿಕ ಬಂಡೆಯಂತೆ ಪ್ರತಿನಿಧೀಕರಿಸಲ್ಪಟ್ಟನು (1 ಕೊರಿಂಥ 10:4).

ಒಂದು ರೀತಿಯಲ್ಲಿ ಎಲ್ಲಾ ಮಾನವ ಜೀವಿಗಳು ದೇವರ ಮಕ್ಕಳಾಗಿದ್ದಾರೆ (ನೋಡಿರಿ ಲೂಕ 3:38) ಮತ್ತು ದೇವದೂತರು ದೇವರ ಮಕ್ಕಳಾಗಿದ್ದಾರೆ (ಯೋಬ 1:6; 2:1); ಆದರೆ ಯೇಸುವು ಒಂದು ರೀತಿಯಲ್ಲಿ ಒಬ್ಬನೇ ದೇವರ ಕುಮಾರನಾಗಿದ್ದಾನೆ (ಕೀರ್ತನೆ 2:7; ಯೋಹಾನ 1:18). ಆತನು ತನ್ನ ತರಹ ಒಬ್ಬಾತನು ಮಾತ್ರ ಆಗಿದ್ದಾನೆ, ಅದ್ವಿತೀಯನಾದಾತನಾಗಿದ್ದಾನೆ. ದೈಹಿಕವಾಗಿ, ಆತನು ಪರಿಶುದ್ಧಾತ್ಮನಿಂದ ಕನ್ಯೆಮರಿಯಳಿಂದ ಜನಿಸಿಬಂದಾತನಾಗಿದ್ದಾನೆ (ಲೂಕ 1:35), ಆದರೆ ಉತ್ತೇಜಿತನಾದ ತಂದೆಯ ರೋಮಾಂಚನಕಾರಿ ಮುಂತಿಳಿಸುವಿಕೆ (''ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ''; ಕೀರ್ತನೆ 2:7) ಬೇತ್ಲೆಹೇಮಿನ ಜನನಕ್ಕೆ ಉಲ್ಲೇಖವಿರಲಿಲ್ಲ. ಅದು ಯೇಸುವಿನ ಪುನರುತ್ಥಾನ ಮತ್ತು ಆತನು ಅರಸನಂತೆ ಕಿರೀಟ ಧರಿಸಲ್ಪಡುವದು ಮತ್ತು ಯಾಜಕನಂತೆ ಅಭಿಷೇಕಿಸಲ್ಪಡುವದಕ್ಕೆ ಸಂಬಂಧಿಸಿ

ಪರಲೋಕದ ಆನಂದದ (ಒಂದು ಮನೆಯಲ್ಲಿ ಜನನದ ವಾರ್ತೆ ಹೇಳಿದ್ದರ ಆನಂದಕ್ಕೆ ಹೋಲಿಕೆಯಂತೆ) ಅಲಂಕಾರಿಕ ವ್ಯಕ್ತಪಡಿಸುವಿಕೆಯಾಗಿತ್ತು (ಅಪೊಸ್ತಲರ ಕೃತ್ಯಗಳು 13:33; ಇಬ್ರಿಯ 1:5; 5:5).

ದೇವತ್ವದ ಎರಡನೆಯ ಸದಸ್ಯನಂತೆ ಆತನು ಎಂದೂ ಅಕ್ಷರಶಃವಾಗಿ ಪಡೆದುಕೊಳ್ಳಲ್ಪಟ್ಟವನಾಗಿರಲಿಲ್ಲ. ಪಡೆದುಕೊಳ್ಳಲ್ಪಟ್ಟ ಮಗನು ಎಂದೂ ತನ್ನ ತಂದೆಯಷ್ಟು ದೊಡ್ಡವನಾಗಿರುವದಿಲ್ಲ. ಯೇಸುವು ಪಡೆದುಕೊಳ್ಳಲ್ಪಟ್ಟವನಾಗಿದ್ದರೆ, ಆತನು ಮೊದಲಿಗನಾಗಿರುತ್ತಿರಲಿಲ್ಲ (ಪ್ರಕಟನೆ 1:17). ದೇವರು ಸೃಷ್ಟಿಸಿದ್ದರಲ್ಲಿ ಆತನು ಪ್ರಾರಂಭವಾಗಿರಲಿಲ್ಲ. ಆದರೆ ಆತನು ಅದರ ಪಾರ್ರಂಭಿಕನಾಗಿದ್ದಾನೆ (ಪ್ರಕಟನೆ 3:14). ಆತನು ತಾನೇ ಪ್ರಾರಂಭವಾಗಿದ್ದಾನೆ (ಪ್ರಕಟನೆ 22:13). ಆತನ ಮೊದಲು ಯಾವುದೂ ಇಲ್ಲ, ಯಾಕಂದರೆ ಆತನು ಸಮಯಾತೀತನಾಗಿದ್ದಾನೆ (ಮೀಕ 5:2; ಪ್ರಕಟನೆ 1:17). ಆದುದರಿಂದ ಅಲಂಕಾರಿಕ ಅರ್ಥದಲ್ಲಿ ಮಾತ್ರವೇ ಯೇಸುವು ದೇವರ ಕುಮಾರನೆಂದು ಕರೆಯಲ್ಪಡಬಹುದು, ಆತನು ಎಲ್ಲಾ ಮಾನವ ಜೀವಿಗಳಿಗಿಂತ ಎಷ್ಟೋ ಶ್ರೇಷ್ಠನಾಗಿದ್ದಾನೆ, ದೇವದೂತರಿಗಿಂತ ಶ್ರೇಷ್ಠನಾಗಿದ್ದಾನೆ, ಮತ್ತು ದೇವತ್ವಕ್ಕಿಂತ ಏನೂ ಕಡಿಮೆಯಾಗಿರುವದಿಲ್ಲ. ತಂದೆಯಾದ ದೇವರಿಗಿಂತ ಮತ್ತು ಪರಿಶುದ್ಧಾತ್ಮನಾದ ದೇವರಿಗಿಂತ ಎಷ್ಟೂ ಕಡಿಮೆ ದೇವತ್ವವಾಗಿರುವದಿಲ್ಲ.

ಇನ್ನೊಂದು ಆಶ್ಚರ್ಯಗೊಳಿಸುವ ಮುಂತಿಳಿಸಿದ ಹೇಳಿಕೆಯು, ಕ್ರಿ. ಶ. 30ರಲ್ಲಿ ಪಂಚಾಶತ್ತಮ ದಿನದಂದು ತನ್ನ ಕುಮಾರನ ಪಟ್ಟಾಭಿಷೇಕದ ಸಮಯದಲ್ಲಿ ತಾನು ಹೇಳುವದನ್ನು ತಂದೆಯಾದ ದೇವರು ಬರೆದಿದ್ದನು: "ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದು" (ಕೀರ್ತನೆ 45:6). ತಂದೆಯು ಯೇಸುವನ್ನು ದೇವರು ಎಂದು ವಿವರಿಸುತ್ತಿದ್ದನು, ಇದು ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನಿಂದ ತೆಗೆದು ಕೊಳ್ಳಲ್ಪಟ್ಟಿದೆ: "ಕುಮಾರನ ವಿಷಯದಲ್ಲಿಯಾದರೋ - ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದು ..." ಎಂದು ಹೇಳಿದ್ದಾನೆ (ಇಬ್ರಿಯ 1:8). ರಿವೈಜ್ಡ ಸ್ಟ್ಯಾಂಡರ್ಡ್ ಆವೃತಿಯು ಕೀರ್ತನೆ 45:6ವ ವಚನವನ್ನು ಬಾಷಾಂತರಿಸುವಾಗ ದೇವರು ಯೇಸುವನ್ನು "ದೇವರು" ಎಂದು ಕರೆದದ್ದನ್ನು ಸಂಪೂರ್ಣವಾಗಿ ತೆಗೆದು ಹಾಕಿದೆ: "ನಿನ್ನ ದೈವಿಕ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು." RSVಯು ಯೇಸುವಿಗೆ ದೈವಿಕ ಸಿಂಹಾಸನವನ್ನು ಕೊಡುತ್ತದೆ ಆದರೆ ಆತನ ದೈವತ್ವವನ್ನು ತೆಗೆದು ಹಾಗುತ್ತದೆ.

ಯೇಸುವಿನ ಬರೋಣದ ಬಗ್ಗೆ ಇನ್ನೊಂದು ಮುಂತಿಳಿಸುವಿಕೆಯು (ಆತನು ಕನ್ನಿಕೆಯ ಕುಮಾರನಾಗಿರುವನು; ಯೆಶಾಯ 7:14) ಆತನ ದೈವತ್ವಕ್ಕೆ ಅಗತ್ಯ ವಾಗಿ ಬೇಕಾಗಿತ್ತು; ಯಾಕಂದರೆ ಕನ್ನಿಕೆಯಿಂದ ಜನಿಸಿರದಿದ್ದರೆ, ಉಳಿದ ನಮಗಿಂತ ಹೆಚ್ಚಾಗಿ ಆತನು ದೈವಿಕನಾಗಿರುತ್ತಿರಲಿಲ್ಲ. ಪ್ರವಾದನೆಯ ಅದೇ ವಚನವು ಆತನಿಗೆ "ಇಮ್ಮಾನುವೇಲ" ಎಂಬ ಹೆಸರನ್ನು ಕೊಡುತ್ತದೆ. ಇದು ಆತನ ವಿಷಯದಲ್ಲಿ ದೇವತ್ವವನ್ನು ಪ್ರತಿಬಿಂಬಿಸುತ್ತದೆ: "ದೇವರು ನಮ್ಮೊಂದಿಗೆ (ಇರುತ್ತಾನೆ)" (ಮತ್ತಾಯ 1:23). "ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು" (ಯೆಶಾಯ 9:6, 7) ಯಾವುದೇ ಮರ್ತ್ಯ ಮಾನವರಿಗೆ ಯೋಗ್ಯ ವಲ್ಲದ ಯೇಸುವಿನ ಬಿರುದಾವಳಿಗಳು, ಎಂಬವು.

ಶರೀರದಲ್ಲಿ ದೇವತ್ವವು ಬರುವ ಇನ್ನೊಂದು ಪ್ರವಾದನೆಯು ಮೋಶೆನಿಂದ ಕೊಡಲ್ಪಟ್ಟಿತು. ಬೇತ್ಲೆಹೇಮಿನಲ್ಲಿ ಜನಿಸಿದಾತನನ್ನು ಅವನು ಮುನ್ನೋಡಿದನು, ಆದರೆ ಆತನ ಮೂಲ ಅಲ್ಲಿರಲಿಲ್ಲ, ಆದರೆ ಆತನ ಹೊರಡೋಣದ ಮೂಲವು ಪುರಾತನವೂ

ಅನಾದಿಯೂ ಆದದ್ದಾಗಿತ್ತು (ಮೀಕ 5:2).

ಈಗಾಗಲೇ, ಯೇಸುವಿನ ಉಜ್ವಲವಾದ ಆದರೆ ರೂಪಕಾತ್ಮಕವಾದ ವಿವರಣೆಯು ದೇವರ ಕುಮಾರನಂತೆ ಹೇಳಲ್ಪಟ್ಟಿದೆ (ಕೀರ್ತನೆ 2:7). ಯೇಸುವು ಬಾಪ್ತಿಸ್ಮ ಹೊಂದಿದಾಗ ಮತ್ತು ಪುನಃ ರೂಪಾಂತರದ ಬೆಟ್ಟದ ಮೇಲೆ ತಂದೆಯಿಂದ ಅದೇ ಬಿರುದು ಕೇಳುವಂತೆ ಉಪಯೋಗಿಸಲ್ಪಟ್ಟಿತು (ಮತ್ತಾಯ 3:17; 17:5). ಯೇಸುವು ನೀರಿನ ಮೇಲೆ ನಡೆದದ್ದನ್ನು ನೋಡಿದನಂತರ, ದೈವತ್ವದ ಇದೇ ವಿಶೇಷ ಅರ್ಥದಲ್ಲಿ, ಯೇಸುವು ದೇವರ ಕುಮಾರನಾಗಿದ್ದಾನೆಂದು ಶಿಷ್ಯರು ಹೇಳಿದರು (ಮತ್ತಾಯ 14:33). ಹಾಗೆಯೇ ಕೈಸರನ ಫಿಲಿಪ್ಪಿಯಲ್ಲಿ ಪೇತ್ರನ ಅರಿಕೆಯು ಈ ನಜರೇತಿನ ಬಡಿಗೆಯವನಿಗೆ ದೇವತ್ವವನ್ನು ಹೊರಿಸಿದನು (ಮತ್ತಾಯ 16:16).

ಒಂದು ವಾಕ್ಯಭಾಗದಲ್ಲಿ ಯೆಹೋವ ಸಾಕ್ಷಿಗಳು ಯೇಸುವನ್ನು "a god" (ಒಬ್ಬ ದೇವರು) (ಯೋಹಾನ 1:1) ಎಂದು ಮಾಡಿದ್ದಾರೆ, ಬೈಬಲ್ ಪಂಡಿತರಿಂದ ಸರಿಯಾದ ಭಾಷಾಂತರವು "God" ಆಗಿ ಯೇಸುವು ಇರುವನೆಂದು ತೋರಿಸಿದ್ದಾರೆ. ತ್ರೈಯೇಕತ್ವ ತತ್ವವನ್ನು ಕಡೆಗಾಣಿಸಲು ತಪ್ಪಾಗಿ ನಡಿಸಲ್ಪಟ್ಟ ಯೆಹೋವನ ಸಾಕ್ಷಿಗಳು ಬಹು ದೇವತಾವಾದಿಗಳಾಗಿದ್ದಾರೆ. ಯೇಸುವನ್ನು "God" ದಿಂದ "god"ಗೆ ಕಡಿಮೆ ಮಾಡಿದ್ದರಲ್ಲಿ (ಮೂಲ ಗ್ರೀಕ ಪ್ರಕಾರ ಎಂದು ಅವರು ಹೇಳುತ್ತಾರೆ) ಅದನ್ನು ವಚನ 6ರಲ್ಲಿ ಉಪಯೋಗಿಸುವದರಲ್ಲಿ ಸೋತು ಹೋಗಿದ್ದಾರೆ; ಯಾಕಂದರೆ ಬಾಪ್ತಿಸ್ಮನಾದ ಯೋಹಾನನು "a god" - (ಒಬ್ಬ ದೇವರಿಂದ ಅಲ್ಲಿ ಗ್ರೀಕ ಬದಲಾಗಿರುವದಿಲ್ಲ) ಕಳುಹಿಸಲ್ಪಟ್ಟ ಮನುಷ್ಯನು ಎಂದು ಭಾಷಾಂತರಿಸಲು ಅವರು ಧೈರ್ಯಗೊಂಡಿಲ್ಲ. ಇದಲ್ಲದೆ, ಯೋಹಾನ 20:28ರಲ್ಲಿ ತೋಮನು ಯೇಸುವಿಗೆ "ನನ್ನ ಕರ್ತ ಮತ್ತು ನನ್ನ a god" ("ಒಬ್ಬ ದೇವರು") (ಅಲ್ಲಿ ಗ್ರೀಕ ಹಾಗೆಯೇ ಉಳಿದುಕೊಂಡಿರುತ್ತದೆ) ಎಂದು ಹೇಳುವಂತೆ ಮಾಡಲು ಧೈರ್ಯಗೊಂಡಿರುವದಿಲ್ಲ, ಯೇಸು ಕೇವಲ "ಒಬ್ಬ ದೇವರು" ("a god") ಆಗಿದ್ದಾನೆ ಎಂದು ಅವರು ನಂಬುತ್ತಾರೆ, ಆದರೆ ತೋಮನು ಹಾಗೆ ಯೋಚಿಸಿದನೆಂದು ಹೇಳುವದಿಲ್ಲ.

ಯೇಸುವನ್ನು ದೇವರಿಗೆ ಸರಿಸಮಾನನನ್ನಾಗಿ ಮಾಡುವದನ್ನು ಆತನ ವೈರಿಗಳು ವಿರೋಧಿಸಿದರು (ಯೋಹಾನ 5:18), ಆದರೆ ಪೌಲನು ಕ್ರಿಸ್ತನ ಆ ಸ್ವಭಾವವನ್ನು ದೃಢಪಡಿಸಿದನು. ಆತನು ದೇವರೊಂದಿಗೆ ಸರಿಸಮಾನನಾಗಿದ್ದುದನ್ನು ಕಳ್ಳತನವಾಗಿ ಇರುವದಿಲ್ಲವೆಂದು ವ್ಯಕ್ತಪಡಿಸಿದನು (ಫಿಲಿಪ್ಪಿ 2:6). ಈ ಅರ್ಥದಲ್ಲಿ, ಯೇಸುವು ತಾನು ಮತ್ತು ತಂದೆಯು ಒಂದೇ ಎಂದು ಹೇಳುವವನಾದನು (ಯೋಹಾನ 10:30). ಒಂದೇ ವ್ಯಕ್ತಿಯಲ್ಲಿ ಅವರು ಒಂದಾಗಿರುವದಿಲ್ಲ, ಆದರೆ ತನ್ನ ತಂದೆ ಮಾಡಿದಂತೆ ಯೇಸುವು ದೈವಿಕ ಸ್ವಭಾವದಲ್ಲಿ ಪಾಲು ತೆಗೆದುಕೊಳ್ಳುವದರಲ್ಲಿ ಒಂದಾಗಿದ್ದಾರೆ.

ತಂದೆಯೊಂದಿಗೆ ಒಂದಾಗಿರುವೆನು ಎಂಬ ಯೇಸುವಿನ ಹಕ್ಕು ಸಾಧನೆಯನ್ನು ಆತನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದವರಿಗೆ ಸ್ಪಷ್ಟವಾಗಿ ಅರ್ಥವಾಗಿತ್ತು. ಯಾಕಂದರೆ ಅವರು ಆತನು "ದೇವರು" (God) ಆಗಿದ್ದಾನೆಂದು ಹೇಳುತ್ತಿರುವನೆಂದು ಅರ್ಥಮಾಡಿಕೊಂಡರು (ಯೋಹಾನ 10:33). ಭೂಲೋಕದ ಕುಮಾರನು ತನ್ನ ತಂದೆಯಂತೆ ಅದೇ ಮಾಂಸ ಮತ್ತು ರಕ್ತವುಳ್ಳವನಾಗಿರುವಂತೆ, ಯೇಸುವು ತನ್ನ ತಂದೆಯಂತೆ ಅದೇ ಸ್ವಭಾವವುಳ್ಳವನು (*charakter tes hupostaseos autou;* ಇಬ್ರಿಯ 1:3) - ಆತನ ತತ್ವದ ನಿರ್ದಿಷ್ಟ ಪ್ರತಿರೂಪವು ಆಗಿದ್ದಾನೆ.

ನಾಲ್ಕನೆಯ ಶತಮಾನದಲ್ಲಿ ಆರಿಯಸನು ಯೇಸುವು ತನ್ನ ತಂದೆಯ "ಹಾಗೆ" (like) (*homoios*) ಇದ್ದನು ಎಂದು ವಾದಿಸಿದನು. ಆದರೆ ಅಥನೇಸಿಯಸನು, ಆತನು

ತತ್ವದಲ್ಲಿ ತನ್ನ ತಂದೆಯಂತೆ "ಒಂದೇಯಾಗಿದ್ದನು; the same" (*homnos*) ಎಂದು ಹೇಳಿದ್ದಾನೆ.[3] ಯೇಸುವು ದೈವತ್ವದ ಪರಿಪೂರ್ಣತೆಯಲ್ಲಿ ಯಾವ ಕೊರತೆಯೂ ಉಳ್ಳವನಾಗಿರಲಿಲ್ಲ, ಯಾಕಂದರೆ ದೇವರ ಸರ್ವಸಂಪೂರ್ಣತೆಯು ಆತನಲ್ಲಿ ಅವತರಿಸಿ ವಾಸಿಸುತ್ತದೆ (ಕೊಲೊಸ್ಸೆ 2:9).

## ಪರಿಶುದ್ಧಾತ್ಮನಾದ ದೇವರು

ಭೌತಿಕ ಸೃಷ್ಟಿಕಾರ್ಯದಲ್ಲಿ ತಂದೆಯಾದ ದೇವರು ಮತ್ತು ಕುಮಾರನಾದ ದೇವರು ಭಾಗವಹಿಸಿದರು, ಅಷ್ಟೇ ಅಲ್ಲ, ಆದರೆ ದೇವರ ಆತ್ಮ ಎಂದು ಕರೆಯಲ್ಪಟ್ಟ ಜೀವಿಯು (ಆದಿಕಾಂಡ 1:2) ಭೂಮಿಯನ್ನು ಮುಚ್ಚಿದ ನೀರುಗಳ ಮೇಲೆ ಚಲಿಸುತ್ತಿತ್ತು. ಈ ಜೀವಿಯು ಜೀವದ ಸೃಷ್ಟಿಯಲ್ಲಿ ಭಾಗವಹಿಸಿತು (ಕೀರ್ತನೆ 104:30; ಯೋಬ 33:4). ನ್ಯಾಯಸ್ಥಾಪಕರನ್ನೂ ಪ್ರವಾದಿಗಳನ್ನೂ ಪ್ರೇರೇಪಿಸುತ್ತಾ ಇಸ್ರಾಯೇಲ್ಯರ ಮಧ್ಯದಲ್ಲಿ ಪರಿಶುದ್ಧಾತ್ಮನು ಜೀವಿಸಿದನು (ಅರಣ್ಯಕಾಂಡ 11:17, 25, 29; 2 ಸಮುವೇಲ 23:2; ಹಗ್ಗಾಯ 2:5), ಆದರೆ ಇಸ್ರಾಯೇಲು ದಂಗೆಯೆದ್ದು ಪರಿಶುದ್ಧಾತ್ಮನನ್ನು ದುಃಖಪಡಿಸಿತು (ಯೆಶಾಯ 63:10, 11). ಪರಿಶುದ್ಧಾತ್ಮನು ತನ್ನನ್ನು ಬಿಟ್ಟು ಹೋಗ ಬಾರದೆಂದು ದಾವೀದನು ಪ್ರಾರ್ಥಿಸಿದನು (ಕೀರ್ತನೆ 51:11).

ಯೇಸುವು ಬಾಪ್ತಿಸ್ಮ ಹೊಂದಿದ ದಿನದಂದು ಈ ಜೀವಿಯು ಪಾರಿವಾಳದಂತೆ ಇಳಿದು ಬಂದಿತು (ಮತ್ತಾಯ 3:16); ಹೀಗೆ ಯೇಸು ಕ್ರಿಸ್ತನು ಪರಿಶುದ್ಧಾತ್ಮನನ್ನು ಸಂಪೂರ್ಣತೆಯಲ್ಲಿ ಹೊಂದಿಕೊಂಡನು (ಯೋಹಾನ 3:34). ಆತನ ಪ್ರಸಂಗಗಳೂ ಆತನ ದಯೆಯ ಕಾರ್ಯಗಳೂ, "ಕರ್ತನ ಆತ್ಮವು ನನ್ನ ಮೇಲೆ ಇದೆ" (ಲೂಕ 4:18; ನೋಡಿರಿ, ಅಪೊಸ್ತಲರ ಕೃತ್ಯಗಳು 10:38) ಎಂದು ಆತನು ಹೇಳಿದಂತೆ ಸಾಧ್ಯವಾಗಿದ್ದವು.

ಯೇಸುವು, ತಾನು ಭೂಲೋಕವನ್ನು ಬಿಟ್ಟು ಹೋಗುವದನ್ನು ನಿರೀಕ್ಷಿಸಿ, ತನ್ನ ಶಿಷ್ಯರಿಗೆ ಪರಿಶುದ್ಧಾತ್ಮನನ್ನು ವಾಗ್ದಾನ ಮಾಡಿದನು; ಲೋಕವು ಸ್ವೀಕರಿಸಿದ ಸತ್ಯದ ಆತ್ಮ ಮತ್ತು ಆದರಿಕನಂತೆ ಆತನನ್ನು ವಿವರಿಸಿದನು (ಯೋಹಾನ 14:16, 17; ನೋಡಿರಿ, KJV). ಆತನು ಅಪೊಸ್ತಲರಿಗೆ ಎಲ್ಲಾ ಸತ್ಯವನ್ನು ಬೋಧಿಸುವನು, ಯೇಸುವು ಅವರಿಗೆ ಹೇಳಿದ್ದೆಲ್ಲವನ್ನೂ ಜ್ಞಾಪಕಕ್ಕೆ ತರುವನು, ಮತ್ತು ಭವಿಷ್ಯವನ್ನು ಪ್ರಕಟಿಸುವನು (ಯೋಹಾನ 14:26; 16:13). ಅವರ ಮೇಲೆ ಆತ್ಮನ ಬರುವಿಕೆಯು ಬಾಪ್ತಿಸ್ಮ ("baptized"; ಅಪೊಸ್ತಲರ ಕೃತ್ಯಗಳು 1:5ಬಿ) ಎಂದು ಕರೆಯಲ್ಪಡುವುದು, ಮತ್ತು ಆತನಿಂದ ಅವರು ಬಲವನ್ನು ಹೊಂದಿಕೊಳ್ಳುವರು (ವಚನ 8). ಅಪೊಸ್ತಲರ ಮುಖಾಂತರ ಆತನ ಕಾರ್ಯಾಚರಣೆಯು "ದೇವರಾತ್ಮ ಸಂಬಂಧವಾದ ಸೇವೆ" ಎಂದು ಕರೆಯಲ್ಪಡುವುದು (2 ಕೊರಿಂಥ 3:8). ಆತನಿಗೆ ವಿರೋಧವಾಗಿ ಮಾತಾಡುವುದು ಕ್ಷಮಿಸಲ್ಪಡುವದಿಲ್ಲ (ಮತ್ತಾಯ 12:32). ಒಂದು ರೀತಿಯಲ್ಲಿ ದಾವೀದನಲ್ಲಿ ಪರಿಶುದ್ಧಾತ್ಮನ ವಾಸಿಸುವಿಕೆಗಿಂತ ಭಿನ್ನವಾಗಿ, ಹೊಸ ಒಡಂಬಡಿಕೆಯ ಸಭೆಯ ಸದಸ್ಯರು ಆತ್ಮನನ್ನು ಹೊಂದಿಕೊಂಡರು (ಯೋಹಾನ 7:39; ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6).

ಆತ್ಮಕ್ಕೆ ಮಾಂಸವೂ ಎಲುಬುಗಳೂ ಇರುವದಿಲ್ಲ (ಲೂಕ 24:39), ಆದಾಗ್ಯೂ ದೇವತ್ವದ ಇತರ ಇಬ್ಬರು ಸದಸ್ಯರಿಂದ ಪ್ರತ್ಯೇಕವಾದ ಮನಸ್ಸು ಪರಿಶುದ್ಧಾತ್ಮನಿಗೆ ಇರುವುದು (ರೋಮಾಪುರ 8:27). ಆತನು ಎಲ್ಲಾ ಸಂಗತಿಗಳನ್ನು ಬಲ್ಲವನಾಗಿದ್ದಾನೆ (1 ಕೊರಿಂಥ 2:11). ಆತನು ಕೇಳಬಲ್ಲನು, ಮಾತಾಡಬಲ್ಲನು ಮತ್ತು ಪ್ರಾರ್ಥಿಸಬಲ್ಲನು

(ಯೋಹಾನ 16:13; ರೋಮಾಪುರ 8:26). ಆತನು ದುಃಖಪಡಿಸಲ್ಪಡಬಲ್ಲನು (ಎಫೆಸ 4:30). ಆತನು ಸಮಯಾತೀತನು (ಇಬ್ರಿಯ 9:14). ಆತನಿಗೆ ಸುಳ್ಳು ಹೇಳುವುದು ದೇವರಿಗೆ ಸುಳ್ಳು ಹೇಳುವುದಾಗಿದೆ (ಅಪೊಸ್ತಲರ ಕೃತ್ಯಗಳು 5:3, 4). ಆತನು ದೇವತ್ವದಲ್ಲಿ, ದೇವತ್ವದ ಇತರ ಸದಸ್ಯರಿಗಿಂತ ಎಷ್ಟೂ ಕಡಿಮೆಯಾಗಿರದಿದ್ದರಿಂದ, ನೀರಿನ ಬಾಪ್ತಿಸ್ಮವು ಆತ್ಮನ ಹೆಸರನ್ನು ಕರೆಯುವದರಿಂದ ಮಾಡಲ್ಪಡಬೇಕೆಂದು ಯೇಸುವು ಸ್ಪಷ್ಟಪಡಿಸಿದನು:

> ಆಗ ಯೇಸು ಹತ್ತರಕ್ಕೆ ಬಂದು, "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಕುಮಾರನ, ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವ ಹಾಗೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೆ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು" (ಮತ್ತಾಯ 28:18-20).

## ಸಂಬಂಧ

ದೇವತ್ವದ ಮೂವರು ಸದಸ್ಯರಲ್ಲಿ ಯಾವ ಸಂಬಂಧವಿರುವುದು? ತಂದೆ ಮತ್ತು ಕುಮಾರ ಮತ್ತು ಪರಿಶುದ್ಧಾತ್ಮ ಸ್ವಭಾವದಲ್ಲಿ - ಅಂದರೆ ದೇವತ್ವವಾಗಿರುವದರಲ್ಲಿ ಒಂದೇಯಾಗಿದ್ದರೂ, ದೇವರಾಗಿರುವದರಲ್ಲಿ - ಅಧಿಕಾರದಲ್ಲಿ ಅವರು ಒಂದೇ ಯಾಗಿರಲಿಲ್ಲ. ಹೊಸ ಒಡಂಬಡಿಕೆಯ ಯುಗದಲ್ಲಿ ಕ್ರಿಸ್ತನು ಎಲ್ಲಾ ಸಂಗತಿಗಳನ್ನು ತುಂಬುತ್ತಾನೆ (ಎಫೆಸ 1:23) ಮತ್ತು ಎಲ್ಲದರಲ್ಲಿ ಎಲ್ಲವೂ ಆಗಿರುತ್ತಾನೆ (ಕೊಲೊಸ್ಸೆ 3:11). ಆತನನ್ನು ಅಗೌರವಿಸುವುದು ತಂದೆಯನ್ನು ಅಗೌರವಿಸುವುದಾಗಿದೆ (ಯೋಹಾನ 5:23); ಆದರೂ ಕ್ರಿಸ್ತನು ತಂದೆಗೆ ಒಳಗಾಗಿರುತ್ತಾನೆ (1 ಕೊರಿಂಥ 3:23), ಮತ್ತು ತಂದೆಯು ಆತನ ಶಿರಸ್ಸಾಗಿದ್ದಾನೆ (1 ಕೊರಿಂಥ 11:3). ತಂದೆಯಾದ ದೇವರು ಯೇಸುವಿಗಿಂತ ದೊಡ್ಡವನಾಗಿದ್ದಾನೆ (ಯೋಹಾನ 14:28); ಆತನು ಎಲ್ಲಕ್ಕಿಂತ ಹೆಚ್ಚು ದೊಡ್ಡವನಾಗಿದ್ದಾನೆ (ಯೋಹಾನ 10:29) ಮತ್ತು ಎಲ್ಲದರ ಮೇಲಿದ್ದಾನೆ (ಎಫೆಸ 4:6). ಪರಲೋಕದಲ್ಲಿ ಕ್ರಿಸ್ತನು ತಾನೇ ತನ್ನ ಅಧಿಕಾರದೊಳಗೆ ಎಲ್ಲವನ್ನೂ ಇಟ್ಟಾತನಿಗೆ ಅಧೀನನಾಗಿರುವನು (1 ಕೊರಿಂಥ 15:28).

ತಂದೆ ಮತ್ತು ಕ್ರಿಸ್ತ ಇಬ್ಬರೂ ಪರಿಶುದ್ಧಾತ್ಮನನ್ನು ಲೋಕದೊಳಗೆ ಕಳುಹಿಸಿದರು (ಯೋಹಾನ 14:16; 15:26), ಮತ್ತು ಆತನು ಮಾಡುವದೆಲ್ಲವೂ ಯೇಸುವನ್ನು ಮಹಿಮೆ ಪಡಿಸುವುದಾಗಿದೆ (ಯೋಹಾನ 16:14). ಹಾಗಾದರೆ ಪರಿಶುದ್ಧಾತ್ಮನಿಗೆ ಪ್ರಾರ್ಥನೆಗಳು ಯೋಗ್ಯವಾಗಿರುವದಿಲ್ಲ. ಇಂದು, ದೇವರ ಚಿತ್ತದಿಂದ ಪ್ರತಿಯೊಂದು ಕುಮಾರನ ಮೇಲೆ ಕೇಂದ್ರೀಕರಿಸಲ್ಪಡುತ್ತದೆ: ತಂದೆಗೆ ಅತೀ ಶ್ರೇಷ್ಠವಾದ ಅಧಿಕಾರ ಇರುವುದು, ಆದರೆ ತನ್ನ ಕುಮಾರನನ್ನು ತನ್ನ ಮೇಲೆ, ಕ್ರೈಸ್ತಯುಗದಲ್ಲಿ, ಉನ್ನತ ಸ್ಥಾನಕ್ಕೇರಿಸಿರುವುದು, ಆತನ ತಾತ್ಕಾಲಿಕ ಚಿತ್ತವಾಗಿದೆ. ಈ ಪರಿಸ್ಥಿತಿಯು ನ್ಯಾಯ ತೀರ್ವಿಕೆಯ ಮುಖಾಂತರವೂ ಮುಂದುವರಿಯುವುದು, ಯಾಕಂದರೆ ತಂದೆಯು ತಾನೇ ಯಾರಿಗೂ ನ್ಯಾಯ ತೀರಿಸುವದಿಲ್ಲ, ಆದರೆ ಕುಮಾರನು ಮಾಡುತ್ತಾನೆ (ಯೋಹಾನ 5:22). ಆಗ, ಸಮಯಾತೀತತೆಗೆ ಸಮಯವು ಮಾರ್ಗಮಾಡುವಾಗ, ಅಧಿಕಾರದ ದೈವಿಕ ವ್ಯವಸ್ಥಾಪನೆಯು (ತಂದೆ, ನಂಬರು ಒಂದು, ಕುಮಾರ ನಂಬರು ಎರಡು ಮತ್ತು ಪರಿಶುದ್ಧಾತ್ಮ ನಂಬರು ಮೂರು)

ಪುನಃ ಕಾರ್ಯಾಚರಣೆಯಲ್ಲಿರುವುದು.

ಟಿಪ್ಪಣಿಗಳು

[1]Richard C. Trench, *Synonyms of the New Testament* (London: N.p., 1880: reprint, Grand Rapids, Mich.: Wm. B. Eerdmans Publishing Co., 1978), 7. [2]William Gesenius, *A Hebrew and English Lexican of the Old Testament,* trans. Edward Robinson, ed. Francis Brown, S. R. Driver, and Charles A. Briggs (Oxford: Clarendon Press, 1957), 43. [3]ಆರಿಯಸ್ ಮತ್ತು ಅಥನೇಸಿಯಸ್‌ರು ಸಭಾ ಪಿತೃಗಳಾಗಿದ್ದು ಕ್ರಿಸ್ತನ ನಿತ್ಯಸ್ವಭಾವದ ಮೇಲೆ ಭಿನ್ನಾಭಿಪ್ರಾಯವುಳ್ಳವರಾಗಿದ್ದರು. ಕ್ರಿ.ಶ. 325ರಲ್ಲಿ ನೈಸಿಯದ ಕೌನ್ಸಿಲು, ಕ್ರಿಸ್ತನು ಅಧೀನನಾದವನು, ದೇವರ ನಿತ್ಯತ್ವದಲ್ಲಿ ಮತ್ತು ದೈವಿಕ ಸ್ವಭಾವದಲ್ಲಿ ಪಾಲುಗಾರನಾಗಲಿಲ್ಲ ಎಂಬ ಆರಿಯಸ್‌ನ ಯೋಚನೆಯನ್ನು ಅಧಿಕೃತವಾಗಿ ಖಂಡಿಸಿತು.

© 2009 Truth for Today